ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

ಶ್ರೀ ಪಿ. ಮುಕುಂದನ್ ವಿರುದ್ಧ ಶ್ರೀಮತಿ ರಾಧಿಕಾ ವಾಸುದೇವನ್ ಹಾಗೂ ಇತರರು

ರಿಟ್ ಅರ್ಜಿಸಂಖ್ಯೆ: 53805/2015 (ಜಿಮ್-ಸಿಪಿಸಿ), ದಿನಾಂಕ 2 ನೇ ಜುಲೈ, 20

ಆಜ್ಞೆ

ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್:

ಅರ್ಜಿದಾರನು ಮೂಲದಾವೆಸಂಖ್ಯೆ: 25874/2010 ರಲ್ಲಿ ಎದುರುದಾರರ ಸಿವಿಲ್ ದಾವೆಯಲ್ಲಿ 3 ನೇ ಪ್ರತಿವಾದಿಯಾಗಿದ್ದು,ದಿನಾಂಕ: 20.11.2015 ರ ಆದೇಶದ ಅಸಿಂಧುಗೊಳಿಸುವಿಕೆಯನ್ನು ಕೋರಿ, ಈ ನ್ಯಾಯಾಲಯದ ರಿಟ್ ಅಧಿಕಾರ ವ್ಯಾಪ್ತಿಯನ್ನು ಕೋರುತ್ತಿದ್ದು, ಅದರ ಒಂದು ಪ್ರತಿಯು ' ಅನುಬಂಧ- ಎ ' ಯಲ್ಲಿದೆ.ಬೆಂಗಳೂರಿನ ಮಾನ್ಯ XV ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಎದುರುದಾರರು-ವಾದಿಗಳಿಗೆ ಅವರ ಸಾಕ್ಷ್ಯದಲ್ಲಿ ಹಾಕಿರುವ, ವಿಷಯದ ದಾಖಲೆಗಳನ್ನು ಗುರುತು ಮಾಡುವಂತೆ ನಿರ್ದೇಶಿಸಲು ನಿರಾಕರಿಸಿದ್ದಾರೆ.ಏಕೆಂದರೆ, ವಾದಿಗಳ ಕಡೆಯ ಮನವಿಯ ಮೇರೆಗೆ ಮಾಡಲಾದ ವಿಚಾರಣಾ ನ್ಯಾಯಾಲಯದ ಆದೇಶದ ಮೇಲೆ ಇದರಲ್ಲಿನ ಅರ್ಜಿದಾರರು ಆ ದಾಖಲೆಗಳನ್ನು ಹಾಜರುಪಡಿಸಿದ್ದರು.ಎದುರುದಾರರು ತಮ್ಮ ವಕೀಲರ ಮುಖಾಂತರ ಹಾಜರಾಗಿದ್ದು, ರಿಟ್ ಅರ್ಜಿಯನ್ನು ವಿರೋಧಿಸಿದ್ದಾರೆ.

2. ಅರ್ಜಿದಾರರ ಪರ ಮಾನ್ಯ ವಕೀಲರು, ಎದುರುದಾರ ವಾದಿಗಳ ಸಂದರ್ಭದಲ್ಲಿ ಮಾಡಲಾದ ಅಧಿವಿಚಾರಣಾ ನ್ಯಾಯಾಲಯದ ನಿರ್ದೇಶನದ ಮೇರೆಗೆ ಅರ್ಜಿದಾರರು ವಿಷಯದ ದಾಖಲೆಗಳನ್ನು ಹಾಜರುಪಡಿಸಿದ್ದು, ಎದುರುದಾರ ವಾದಿಗಳು ಅದನ್ನು ಸಾಕ್ಷ್ಯದಲ್ಲಿ ಒತ್ತಿ ಹೇಳಿದ್ದು, ನ್ಯಾಯಾಲಯವು ಅವರ ನಿಶಾನೆಗಳ ಸರಣಿಗಳಿಂದ ಅವುಗಳನ್ನು ಗುರುತು ಮಾಡದೆ ಅವರನ್ನು ಹೋಗಲು ಬಿಡುವುದನ್ನು ಸಮರ್ಥಿಸಿಲ್ಲ; ಸಾಕ್ಷ್ಯ ಎ ಅಧಿನಿಯಮ, 1872 ರ 163 ನೇ ಪ್ರಕರಣದ ಮೂಲ ಪಾಠವು ಕಡ್ಡಾಯವಾಗಿದ್ದು, ಈ ನ್ಯಾಯಾಲಯದ ಒಳಗೊಳ್ಳುವಿಕೆಯನ್ನು ಸಮರ್ಥಿಸುವ ಪ್ರಶ್ನಿತ ಆದೇಶದ ಮೇಲೆ ಇಲ್ಲಿ ಸ್ಪಷ್ಟ ದೋಷ ವ್ಯಕ್ತವಾಗಿದೆಯೆಂದು ವಕೀಲರು ನಿವೇದಿಸಿದ್ದಾರೆ ಅವರು ತಮ್ಮ ದೃಢ ಹೇಳಿಕೆಯನ್ನು ಸಮರ್ಥಿಸಿಕೊಳ್ಳುವಲ್ಲಿ ಮದ್ರಾಸ್ ಮತ್ತು ಬಾಂಬೆ ಉಚ್ಚ ನ್ಯಾಯಾಲಯದ ತೀರ್ಪುಗಳ ಮೇಲೆ ಚ ಅವಲಂಬಿತರಾಗಿದ್ದಾರೆ.ಎದುರುದಾರರ ಪರ ಹಾಜರಾದ ಮಾನ್ಯ ವಕೀಲರು ಪ್ರಶ್ನಿತ ಆದೇಶವನ್ನು ಸಮರ್ಥಿಸಿ ತಮ್ಮ ನಿವೇದನೆಯನ್ನು ಮಂಡಿಸಿದರು.

3. ಅರ್ಜಿದಾರರ ಪರ ಮಾನ್ಯ ವಕೀಲರ ಮತ್ತು ಎದುರುದಾರರ ಪರ ಮಾನ್ಯ ವಕೀಲರ ವಾದಗಳನ್ನು ನಾನು ಆಲಿಸಿದ್ದೇನೆ.ಅರ್ಜಿಯ ಕಾಗದಪತ್ರಗಳನ್ನು ಅವಗಾಹಿಸಿದ್ದೇನೆ.ನ್ಯಾಯಪೀಠಗಳಲ್ಲಿ ಉಲ್ಲೇಖಿಸಲಾದ ತೀರ್ಮಾನಗಳನ್ನು ನಾನು ಗಮನಿಸಿದ್ದೇನೆ.

4. ಎದುರುದಾರ ವಾದಿಗಳು ತಮ್ಮ ಸಾಕ್ಷ್ಯದಲ್ಲಿನ ದಾಖಲೆಗಳನ್ನು ಒಪ್ಪಿಕೊಂಡಿದ್ದು, ಅವರಿಂದ ಪಡೆಯಲಾದ ವಿಷಯದ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಅದರ ನಿದೇಶನಕ್ಕನುಸಾರವಾಗಿ ಹಾಜರುಪಡಿಸಲಾಗಿದ್ದು, ಅವುಗಳನ್ನು ಪರಿಶೀಲಿಸಲಾಗಿದೆ ಎಂಬುದರಲ್ಲಿ ವಿವಾದವಿಲ್ಲ.ವಾದಿಗಳ ಕಡೆಯಿಂದ ಸದರಿ ದಾಖಲೆಗಳನ್ನು ವಾದಿಗಳಿಂದ ಗುರುತು ಮಾಡಿಸಬೇಕೆಂದು ಅರ್ಜಿದಾರರು ಮನವಿ ಮಾಡಿದ್ದರೂ ಸಹ

ವಿಚಾರಣಾ ನ್ಯಾಯಾಲಯವು ವಾದಿಗಳು ಇಚ್ಛಿಸದಿದ್ದಾಗ ಅವರ ದಾಖಲೆಗಳನ್ನು ಅನುಕ್ರಮವಾಗಿ ಗುರುತು ಮಾಡುವಂತೆ ವಾದಿಗಳನ್ನು ಒತ್ತಾಯಿಸುವುದು ನ್ಯಾಯಾಲಯದ ಕಡೆಯಿಂದ ಅನುಚಿತವಾಗುತ್ತದೆಂಬ ಆಧಾರದ ಮೇಲೆ ಅವರನ್ನು ಗುರುತು ಮಾಡದೆ ಹೋಗಲು ಬಿಟ್ಟಿದೆ.

5. ಭಾರತ ಸಾಕ್ಷ್ಯ ಎಂ ಅಧಿನಿಯಮದ 163 ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗುತ್ತದೆ:

163. ನೋಟೀಸು ಮೇರೆಗೆ ಕೋರಲಾದ ಮತ್ತು ಹಾಜರುಪಡಿಸಲಾದ ದಸ್ತಾವೇಜನ್ನು ಸಾಕ್ಷ್ಯವನ್ನಾಗಿ ಕೊಡುವುದು.ಯಾವ ದಸ್ತಾವೇಜನ್ನು ಹಾಜರುಪಡಿಸಬೇಕೆಂದು ಒಬ್ಬ ಪಕ್ಷಕಾರನು ಇನ್ನೊಬ್ಬ ಪಕ್ಷಕಾರನಿಗೆ ನೋಟೀಸು ಕೊಟ್ಟಿದ್ದಾನೆಯೋ ಆ ದಸ್ತಾವೇಜನ್ನು ಅವನು ಕೋರಿದಾಗ, ಮತ್ತು ಅಂತಹ ದಸ್ತಾವೇಜನ್ನು ಹಾಜರುಪಡಿಸಲಾಗಿದ್ದು ಮತ್ತು ಅದನ್ನು ಹಾಜರುಪಡಿಸಬೇಕೆಂದು ಕೋರಿದ ಪಕ್ಷಕಾರನು ಅದನ್ನು ಪರಿಶೀಲಿಸಿದ ಮೇಲೆ, ಅದನ್ನು ಹಾಜರು ಮಾಡುವ ಪಕ್ಷಕಾರನು ಅವನು ಅದನ್ನು ಸಾಕ್ಷ್ಯವನ್ನಾಗಿ ಕೊಡಬೇಕೆಂದು ಅಪೇಕ್ಷಿಸಿದರೆ ಅವನು ಹಾಗೆ ಮಾಡಲು ಬದ್ಧನಾಗಿರುತ್ತಾನೆ."

ಈ ಪ್ರಕರಣದ ಭಾಷೆಯು ಸಾಧ್ಯವಾದಷ್ಟೂ ಸರಳವಾಗಿದ್ದು, ಇದಕ್ಕೆ ಅರ್ಥ ವಿವರಣೆಯ ಅಗತ್ಯವಿರುವುದಿಲ್ಲ.ಇದು ಶಾಸನ ಶಬ್ದದ ಅತ್ಯಂತ ಪ್ರಬಲವಾದ ಪ್ರಕರಣವಾಗಿದೆ.ವುಡ್ರೋಫೆ ಮತ್ತು ಅಮೀರ್ ಅಲಿ ರವರಿಂದ ಸಾಕ್ಷ್ಯದ ಕಾನೂನಿನಲ್ಲಿ, 20 ನೇ ಆವೃತ್ತಿ ಪಿ. 5528 ಹಾಗೂ 5529 ರಲ್ಲಿ ಈ ಪ್ರಕರಣದ ನ್ಯಾಯಸಮ್ಮತ ಆಧಾರವನ್ನು ಈ ಕೆಳಗಿನಂತೆ ನಿರೂಪಿಸಲಾಗಿದೆ:

" ಈ ನಿಯಮಕ್ಕೆ ಕಾರಣವೇನೆಂದರೆ ಇದು ಒಬ್ಬ ಪಕ್ಷಕಾರನಿಗೆ ತನ್ನ ಬ ಪ್ರತಿಕಕ್ಷಿಯ ವ್ಯವಹಾರಗಳನ್ನು ಹೊಂಚಿ ನೋಡುವುದನ್ನು ಸಾಧ್ಯಗೊಳಿಸಲು ನ್ಯಾಯವಲ್ಲದ ಅನುಕೂಲವನ್ನು ನೀಡುತ್ತದೆ.ಅದೇ ಸಮಯದಲ್ಲಿ, ಅವನು ಏನನ್ನು ನೋಡುತ್ತಾನೋ ಅದನ್ನು ಎರಡೂ ಪಕ್ಷಕಾರರಿಗೆ ಸಾಕ್ಷ್ಯವನ್ನಾಗಿ ಮಾಡುವ ಅಪಾಯಕ್ಕೆ ಒಳಪಡಿಸುವುದಿಲ್ಲ.ಇದರಲ್ಲಿ ಒಂದು ಪ್ರಕರಣದ ಪಕ್ಷಕಾರನು ಇನ್ನೊಬ್ಬ ಪಕ್ಷಕಾರನಿಂದ ದಾಖಲೆಯನ್ನು ತರಿಸಿಕೊಂಡು, ಅದನ್ನು ಪರಿಶೀಲಿಸಿದಲ್ಲಿ, ಅವನು ಅದನ್ನು ಎರಡೂ ಪಕ್ಷಕಾರರಿಗೆ ಸಾಕ್ಷ್ಯವನ್ನಾಗಿ ಮಾಡುವ ಅಪಾಯ ತಂದುಕೊಳ್ಳುತ್ತಾನೆ.

6. ರಾಜಗೋಪಾಲ ಅಯ್ಯಂಗಾರ್ -ವಿರುದ್ಧ-ರಾಮಾನುಜ ಅಯ್ಯಂಗಾರ್ ಮತ್ತು ಇತರರು ಎಐಆರ್ 1923 ಎಂಎಡಿ 607 ಪ್ರಕರಣದಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯವು, ಲೀಲಾಧರ್ ಚ ರತನ್ಲಾಲ್ ವ್ಯಾಸ್ – ವಿರುದ್ಧ- – ಹೊಲ್ಕುರ್ಮಲ್ ಸೋಹನ್ ಲಾಲ್ ಎಐಆರ್ 1959 ಬಾಂಬೆ 528 ಪ್ರಕರಣದಲ್ಲಿ ಬಾಂಬೆ ಉಚ್ಚ ನ್ಯಾಯಾಲಯದ ನಾಗ್ಪುರ ಪೀಠವು ಮತ್ತು ಯೂನಿಯನ್ ಚ ಆಫ್ ಇಂಡಿಯಾ – ವಿರುದ್ಧ- – ಫರ್ಮ್ ವಿಶುದ್ ಘೀ ವ್ಯೋಪಾರ್ ಮಂಡಲ್ ಎಐಆರ್ 1953 ಅಲಹಾಬಾದ್ 689 ಪ್ರಕರಣದಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯವು ಮೇಲ್ಕಂಡ ಕಾನೂನಿನ ಚ ಉಪಬಂಧದ ಅರ್ಥ ವಿವರಣೆಯನ್ನು ನೀಡಿದ್ದು, ಅವು ಅತ್ಯಂತ ಖ್ಯಾತ ಲೇಖಕರು ಮೇಲೆ ಹೇಳಿರುವುದನ್ನು ಪ್ರತಿಧ್ವನಿಸಿವೆ.

ಈ ಮೇಲ್ಕಂಡ ಸನ್ನಿವೇಶಗಳಲ್ಲಿ ಈ ರಿಟ್ ಅರ್ಜಿಯು ಸಫಲವಾಗಿರುತ್ತದೆ; ವಿಚಾರಣಾ ನ್ಯಾಯಾಲಯವು ವಾದಿಗಳ ಕಡೆಯಿಂದ ವಸ್ತು ವಿಷಯ ದಾಖಲೆಗಳ ಗುರುತು ಮಾಡಿಸತಕ್ಕದ್ದು ಹಾಗೂ ವಿಷಯವನ್ನು ಮುಂದಿನ ಪ್ರಕ್ರಿಯೆಗೆ ಒಳಪಡಿಸತಕ್ಕದ್ದು.ವೆಚ್ಚಗಳಿಗೆ ಯಾವುದೇ ಆದೇಶವಿಲ್ಲ.